ಕರ್ನಾಟಕ ಸರ್ಕಾರ

# ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು,

**ಭಾರತೀಯ ಪಠ್ಯಪುಸ್ತಕ ಮುದ್ರಣಾಲಯ ಆವರಣ, ಸಿದ್ಧಾರ್ಥನಗರ, ಮೈಸೂರು ೫೭೦೦೧೧.**

Government of Karnataka

# Chamarajendra Govt. College of Visual Arts,

Indian Text Book Press campus, Siddarthanagara Mysuru 570 011.

**Phone: 0821-2438931. e-mail:deancava@gmail.com**




# ಮಾಹಿತಿ ಪತ್ರ

# INFORMATION LEAFLET

ಕರ್ನಾಟಕ ಸರ್ಕಾರ

**ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು,**

ಭಾರತೀಯ ಪಠ್ಯಪುಸ್ತಕ ಮುದ್ರಣಾಲಯ ಆವರಣ, ಸಿದ್ಧಾರ್ಥನಗರ, ಮೈಸೂರು ೫೭೦೦೧೧

Government of Karnataka

**Chamarajendra Govt. College of Visual Arts,**

Indian Text Book Press campus, Siddarthanagara Mysuru 570 011.

Phone: 0821-2438931. e-mail:deancava@gmail.com

## ಮಾಹಿತಿ ಪತ್ರ

ಕಲಾ ವಿದ್ಯಾರ್ಥಿಗಳಲ್ಲಿ ಹುದಗಿರುವ ಕಲಾತ್ಮಕ ಸಂವೇದನೆ ಮತ್ತು ಕೌಶಲ್ಯವನ್ನು ಸಂವರ್ಧಿಸಲು ಕರ್ನಾಟಕ ಸರ್ಕಾರ 1982ರಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಡಿಯಲ್ಲಿ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜ್‌ನ್ನು [ಕಾವಾ] ಸ್ಥಾಪಿಸಿತು. ದೃಶ್ಯಕಲಾ ಶಿಕ್ಷಣಕ್ಕೆ ಮೀಸಲಾಗಿರುವ ಈ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತಗೊಂಡಿದೆ.

ಕಾವಾ ನಾಲ್ಕು ವರ್ಷ ಶೈಕ್ಷಣಿಕ ಅವಧಿಯ (ಎಂಟು ಸೆಮಿಸ್ಟರ್ C.B.C.S ಪದ್ದತಿ) ಆರು ವಿಷಯಗಳಲ್ಲಿ B.V.A (Bachelor of Visual Arts) ವೃತ್ತಿಪರ ಪದವಿ ಶಿಕ್ಷಣವನ್ನು ನೀಡುತ್ತದೆ. ಅವುಗಳೆಂದರೆ; ಚಿತ್ರಕಲೆ, ಶಿಲ್ಪಕಲೆ, ಗ್ರಾಫಿಕ್ಸ್ ಕಲೆ, ಅನ್ವಯಕಲೆ, ಛಾಯಚಿತ್ರ ಮತ್ತು ಛಾಯಪತ್ರಿಕೋದ್ಯಮ ಮತ್ತು ಕಲಾಇತಿಹಾಸ. ದಿನ ದಿನಕ್ಕೆ ಬೆಳೆಯುತ್ತಿರುವ ದೃಶ್ಯಕಲಾ ಕ್ಷೇತ್ರದ ಬೇಡಿಕೆಗೆ ಅನುಗುಣವಾಗಿ ಕೌಶಲ್ಯ ಮತ್ತು ಕಲ್ಪನೆಯ ಸಮ್ಮಿಳಿತದೊಂದಿಗೆ ಪಠ್ಯಕ್ರಮವನ್ನು ರೂಪಿಸಲಾಗಿದೆ. ನುರಿತ ಶಿಕ್ಷಕ ವೃಂದ, ಅಪಾರ ಕಲಾ ಪುಸ್ತಕಗಳ ಸಂಗ್ರಹದ ವಾಚನಾಲಯ, ಆಧುನಿಕ ದೃಶ್ಯ ಶ್ರವಣ ಉಪಕರಣಗಳೊಂದಿಗೆ ಸುಸಜ್ಜಿತವಾದ ಸ್ಟುಡಿಯೋಗಳಿದ್ದು, ಕಲಿಕಾ ವಾತಾವರಣ ಕಾವಾ ಆವರಣದಲ್ಲಿದೆ.

B.V.A. ಕೋರ್ಸನ ಮೊದಲ ಎರಡು ಸೆಮಿಸ್ಟರ್‌ಗಳಲ್ಲಿ ದೃಶ್ಯಭಾಷೆಯ ಮೂಲಾಂಶಗಳನ್ನು ಕಲಿತ ನಂತರ ಮೂರನೇ ಸೆಮಿಸ್ಟರ್‌ನಿಂದ ತಾನಾಯ್ದುಕೊಂಡ ವಿಷಯದಲ್ಲಿ ಪರಿಣಿತಿ ಹೊಂದುವ ಅವಕಾಶವಿದೆ. ಎಲ್ಲಾ ವಿಭಾಗಗಳ ಮೂಲ ಆಶಯ ಅಭಿವ್ಯಕ್ತಿ, ಸಂವಹನ ಮತ್ತು ಕಲೆಯ ಅನ್ವಯತೆ.

**ಚಿತ್ರಕಲೆ:** ರೇಖಾ ಚಿತ್ರಣ ಮತ್ತು ಬಿಂಬ/ರೂಪ ರಚನಾ ಕ್ರಮಕ್ಕೆ ಒತ್ತು ನೀಡಲಾಗಿದೆ. ಮಾನವ ನಿರ್ಮಿತ ವಸ್ತುಗಳು, ಪ್ರಕೃತಿದತ್ತ ವಸ್ತುಗಳು ಮತ್ತು ರೂಪದರ್ಶಿ ಅಭ್ಯಾಸವಿರುತ್ತದೆ. ಜಲವರ್ಣ ಮತ್ತು ತೈಲವರ್ಣ ಬಳಕೆ ಮತ್ತು ಸಮಕಾಲೀನ ಕಲೆಯ ಬೆಳಕಿನಲ್ಲಿ ಸ್ವಯಂ ಪ್ರಕಾಶಿತಗೊಂಡು ಕಲಾತ್ಮಕ ಕೃತಿಗಳನ್ನು ರಚಿಸುವುದಕ್ಕೆ ಸಂಪೂರ್ಣ ಸ್ವಾತಂತ್ರ್ಯವಿದೆ.

**ಗ್ರಾಫಿಕ್ಸ್ ಕಲೆ:** ಸಂವೇದನಾಶೀಲ ಚಿತ್ರಗಳನ್ನು ಸೃಷ್ಠಿಸಿ ಕಲಾತ್ಮಕವಾಗಿ ನಿಯಮಿತ ಪ್ರತಿಗಳನ್ನು ತೆಗೆಯುವ ಅಚ್ಚುಕಲೆಗೆ ತನ್ನದೇ ಆದ ಸಂಪ್ರಾದಾಯಿಕ ತಂತ್ರಗಾರಿಕೆಯ ಇತಿಹಾಸವಿದೆ. ವುಡ್‌ಕಟ್, ಲಿನೋಕಟ್, ಮೆಟಲ್ ಎಚ್ಚಿಂಗ್, ಲಿಥೋಗ್ರಾಫಿ, ಸೆರಿಗ್ರಾಫಿ ಮತ್ತು ಫೋಟೋ ಎಚ್ಚಿಂಗ್ ಹೀಗೆ ಪ್ರಿಂಟಿಂಗ್‌ನ ಹಲವು ಮುಖಗಳ ಪರಿಚಯ ಪಠ್ಯಕ್ರಮದಲ್ಲಿ ಅಡಕಗೊಂಡಿದೆ.

**ಶಿಲ್ಪಕಲೆ:** ಮಣ್ಣಿನಲ್ಲಿ ರೂಪಾಕಾರಗಳ ರಚನೆ, ವ್ಯಕ್ತಿಶಿಲ್ಪ ರಚನೆ, ಕಲ್ಲು ಮತ್ತು ಮರಗೆತ್ತನೆ, ಲೋಹ ಎರಕದ ಶಿಲ್ಪಗಳನ್ನು, ಸಿಮೆಂಟ್ ಶಿಲ್ಪಗಳನ್ನು, ಫೈಬರ್ ಶಿಲ್ಪಗಳನ್ನು ಹಾಗೂ ಸುಡಾವೆ ಶಿಲ್ಪಗಳನ್ನು ಸೃಷ್ಟಿಸುವ ಸಾಮರ್ಥ್ಯ ಹೊಂದುವಿರಿ. ಹೀಗೆ ಹಲವು ಮಾಧ್ಯಮಗಳಲ್ಲಿ ನಿಮ್ಮ ಸ್ವತಂತ್ರ ಸ್ವಪ್ನಗಳು ಘನರೂಪ ಪಡೆಯುತ್ತವೆ. ಶಿಲ್ಪಕಲೆಯ ಪಠ್ಯಕ್ರಮ ನಿಮ್ಮಾಸಕ್ತಿಯನ್ನು ಪೂರೈಸುತ್ತದೆ.

**ಅನ್ವಯಕಲೆ:** ದೃಶ್ಯಕಲೆ ಸಂವಹನ ಮಾಧ್ಯಮದ ಪ್ರಮುಖ ಅಸ್ತ್ರ. ಚಿತ್ರ ಭಾಷೆಯಲ್ಲಿ ನಡೆಯುವ ಸಂಭಾಷಣೆ ಮಾನವ ಕುಲಕ್ಕೆ ಸರಳವಾಗಿ ಅರ್ಥವಾಗುತ್ತದೆ. ಇಂದಿನ ಡಿಜಿಟಲ್ ಸಮಾಜ ಸಂಪೂರ್ಣ ಚಿತ್ರ ಭಾಷೆಯ ಹಿಡಿತದಲ್ಲಿದೆ. ದಿನನಿತ್ಯದ ನಡೆಯಲ್ಲಿ ಚಿತ್ರ ಭಾಷೆಯನ್ನು ದುಡಿಸಿ ಕೊಳ್ಳುವ ಪರಿಯಲ್ಲಿ ಅನ್ವಯಕಲೆಯ ಪಠ್ಯಕ್ರಮ ರೂಪಿತಗೊಂಡಿದೆ. ಕರಪತ್ರದಿಂದ ಪ್ರಾರಂಭಗೊಂಡು ಡಿಜಿಟಲ್ ಕಲೆಯವರೆಗೆ ಕಲಿಕಾ ಹರವು ಇಲ್ಲಿದೆ.

**ಛಾಯಚಿತ್ರ ಮತ್ತು ಛಾಯಪತ್ರಿಕೋದ್ಯಮ:** ಛಾಯಚಿತ್ರ ಮತ್ತು ಛಾಯಪತ್ರಿಕೋದ್ಯಮ; ಮೈಸೂರು ವಿಶ್ವವಿದ್ಯಾಲಯದ ಮತ್ತು ನಮ್ಮ ಸಂಸ್ಥೆಯ ವಿಶೇಷ ಹೆಮ್ಮೆಯ ವಿಭಾಗ. ಛಾಯಚಿತ್ರ ತಂತ್ರಗಾರಿಕೆಗೆ ಕಲಾತ್ಮಕ ಸ್ಪಂದನೆ ನೀಡುವುದು ಒಂದಾದರೆ ಛಾಯಚಿತ್ರದ ಮೂಲಕ ಸಮೂಹ ಸಂವಹನ ಮತ್ತೊಂದು ಮುಖ. ಈ ವಿಭಾಗದಲ್ಲಿ

ವಿದ್ಯಾರ್ಥಿ ಕಲಾತ್ಮಕ ಛಾಯಚಿತ್ರಗಾರನಾಗಿಯೂ ಮತ್ತು ಛಾಯಪತ್ರಿಕೋದ್ಯಮಿಯಾಗಿಯೂ, ರೂಪಗೊಳ್ಳವುದಕ್ಕೆ ವಿಪುಲ ಅವಕಾಶಗಳಿವೆ.

**ಕಲಾ ಇತಿಹಾಸ:** ಗುಹಾಮಾನವನ ಕಾಲದಿಂದ ಪ್ರಸ್ತುತ ದಿನದವರೆಗೆ ದೃಶ್ಯಭಾಷೆಯ ಬೆಳವಣಿಗೆ ಮತ್ತು ಕಲೆಯಲ್ಲಡಗಿರುವ ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಮತ್ತು ದಾರ್ಶನಿಕ ಹಾಗೂ ಆಧುನಿಕ ಕಲೆಯ ಸಿದ್ಧಾಂತಗಳನ್ನು ಅರಿಯುವ ಪಠ್ಯಕ್ರಮ ಇಲ್ಲಿದೆ. ಭಾರತೀಯ ಕಲೆ, ಇಂಡೋ ಇಸ್ಲಾಮಿಕ್ ಕಲೆ, ಯುರೋಪಿಯನ್ ಕಲೆ, ಚೀನಾ ಮತ್ತು ಜಪಾನ್ ಕಲೆ ಕುರಿತು ವಿಶೇಷ ಪತ್ರಿಕೆಗಳಿದ್ದು, ಸಮಕಾಲೀನ ಕಲೆ, ಕಲಾ ವಿಮರ್ಶೆಯನ್ನೊಳಗೊಂಡ ಶಿಸ್ತು ಇದಾಗಿದೆ.

**ಭಾಷಾ ಮತ್ತು ಕಡ್ಡಾಯ ಪತ್ರಿಕೆಗಳು:** ಭಾರತದ ಸಂವಿಧಾನ ಮತ್ತು ಪರಿಸರ ಅಧ್ಯಯನ ಹಾಗೂ ಭಾಷಾ ಪತ್ರಿಕೆ ಮತ್ತು ಭಾಷಾ ವಿನಾಯತಿ ವಿಶ್ವವಿದ್ಯಾನಿಲಯದ ಪಠ್ಯಕ್ರಮಕ್ಕನುಗುಣವಾಗಿ ಶಿಕ್ಷಣ ಕ್ರಮದಲ್ಲಿ ಅಳವಡಿಕೆಗೊಂಡಿರುತ್ತದೆ. ಭಾಷಾ ಪತ್ರಿಕೆ (ಮಾತೃಭಾಷೆ) ವಿದ್ಯಾರ್ಥಿ ತನ್ನಿಷ್ಟದಂತೆ ಆಯ್ದುಕೊಳ್ಳವ ಅವಕಾಶವಿರುತ್ತದೆ. ಆದರೆ ಸ್ವಯಂ ಅಭ್ಯಾಸ ಮಾಡಿಕೊಳ್ಳವ ಷರತ್ತಿನೊಂದಿಗೆ ಅನುಮತಿ ನೀಡಲಾಗುವುದು.

**ಕಾಲೇಜು ಸಮಯ:** ಸೋಮವಾರದಿಂದ ಶುಕ್ರವಾರದವರೆಗೆ ಬೆಳಗ್ಗೆ 9:30 ರಿಂದ ಸಂಜೆ 4:00 ಗಂಟೆಯವರೆಗೆ ಮತ್ತು ಶನಿವಾರದಂದು ಬೆಳಗ್ಗೆ 9:30 ರಿಂದ ಮಧ್ಯಾಹ್ನ 1:30 ರವರೆಗೆ.

**ಅರ್ಜಿ ಶುಲ್ಕ:** ಅರ್ಜಿಯನ್ನು ನಗದು ರೂಪದಲ್ಲಿ ಪಡೆದಲ್ಲಿ 250/– ರೂಪಾಯಿಗಳು ಅಂಚೆ ಮೂಲಕ ಪಡೆಯುವವರು 350/– ರೂಪಾಯಿಯನ್ನು ಡೀನ್, ಕಾವಾ, ಮೈಸೂರು, ಇವರ ಹೆಸರಿನಲ್ಲಿ ಡಿ.ಡಿ ಸಲ್ಲಿಸುವುದು. ನಿಗಧಿತ ದಿನಾಂಕದೊಳಗೆ ಭರ್ತಿ ಮಾಡಿದ ಅರ್ಜಿಯನ್ನು ಕಾವಾ ಕಛೇರಿಗೆ ತಲುಸಪಿಬೇಕು. ಅರ್ಜಿಯಲ್ಲಿ ತಿಳಿಸಿರುವ ಎಲ್ಲಾ ದಾಖಲಾತಿ (ಪೋಟೋ ಪ್ರತಿಗಳನ್ನು) ಲಗತ್ತಿಸಬೇಕು. ಸಂದರ್ಶನದ ಸಮಯದಲ್ಲಿ ಎಲ್ಲಾ ದಾಖಲಾತಿಗಳ ಮೂಲ ಪ್ರತಿಗಳನ್ನು ಪರಿಶೀಲಿಸಲು ಹಾಜರುಪಡಿಸಬೇಕು.

**ವಿಶೇಷ ಸೂಚನೆಗಳು:**

1. ದ್ವಿತೀಯ ಪಿ.ಯು.ಸಿ./ದ್ವಿತೀಯ ಮೂಲ ತರಗತಿ/ 10+2 ಸಿಬಿಎಸ್ಸಿ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರುವ ಅಂಕಪಟ್ಟಿ ಮತ್ತು ವರ್ಗಾವಣೆ ಪಟ್ಟಿಯನ್ನು ಲಗತ್ತಿಸುವುದು.
2. ಪ.ಜಾತಿ/ಪ.ಪಂಗಡ ಇತರ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರವನ್ನು ಸೂಕ್ತ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರವನ್ನು ಲಗತ್ತಿಸುವುದು ಕಡ್ಡಾಯವಾಗಿರುತ್ತದೆ.
3. **ವಯೋಮಿತಿ:** 24 ವರ್ಷಗಳು (ಪ್ರವೇಶ ಪರೀಕ್ಷಾ ದಿನಾಂಕಕ್ಕೆ 24 ವರ್ಷ ಮೀರಿರುವ ಅಭ್ಯರ್ಥಿಗಳಿಗೆ ಅವಕಾಶವಿರುವುದಿಲ್ಲ) ಎಸ್.ಸಿ/ಎಸ್.ಟಿ ಅಭ್ಯರ್ಥಿಗಳಿಗೆ ಎರಡು ವರ್ಷದ ರಿಯಾಯಿತಿ ಇದೆ.
4. ಅಪೂರ್ಣ ಮಾಹಿತಿ ಮತ್ತು ಸಂಬಂಧಿತ ದಾಖಲಾತಿಗಳಿಲ್ಲದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
5. ಮೀಸಲಾತಿಗಾಗಿ ಜಾತಿ ಪ್ರಮಾಣ ಲಗತ್ತಿಸದ ಅರ್ಜಿಯಲ್ಲಿನ ಅಭ್ಯರ್ಥಿಯನ್ನು ಸಾಮಾನ್ಯ ಅಭ್ಯರ್ಥಿಯೆಂದು ಪರಿಗಣಿಸಲಾಗುವುದು.
6. ಮೀಸಲಾತಿ ಸೀಟು ಹಂಚಿಕೆಯು ಸರ್ಕಾರದ ನಿಯಮದಂತೆ ಅನುಸರಿಸಲಾಗುವುದು.
7. B.V.A- Painting, B.V.A- Graphics, B.V.A- Sculpture, B.V.A- Applied Art, B.V.A- Photography and Photo journalism , B.V.A – Art History ಎಂದು ಆರು ವಿಶೇಷ ಪದವಿ ಕೋರ್ಸ್‌ಗಳಿದ್ದು, ಒಟ್ಟು 60 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ. ಅರ್ಜಿಯಲ್ಲಿ ಅಭ್ಯರ್ಥಿಯು ತಮಗಿಷ್ಟವಾದ ಒಂದು ವಿಷಯ ಆಯ್ದುಕೊಳ್ಳಬೇಕು. ಉಳಿದಂತೆ ಆದ್ಯತೆ ಮೇರೆಗೆ ಎರಡು ವಿಷಯಗಳನ್ನು ನಮೂದಿಸಬೇಕು.
8. ಶೈಕ್ಷಣಿಕ ವೇಳಾಪಟ್ಟಿ ವಿಶ್ವವಿದ್ಯಾನಿಲಯದ ನಿರ್ದೇಶನಕ್ಕೆ ಅನುಗುಣವಾಗಿರುತ್ತದೆ.

**ಪ್ರವೇಶ ಪರೀಕ್ಷೆ:** ಪ್ರವೇಶ ಪರೀಕ್ಷೆಯಲ್ಲಿ ಸಾಮಾನ್ಯಜ್ಞಾನ, ಪ್ರಾಯೋಗಿಕ (ಡ್ರಾಯಿಂಗ್ ಟೆಸ್ಟ್) ಮತ್ತು ವೈಯಕ್ತಿಕ ಸಂದರ್ಶನ ಎಂದು ಮೂರು ಭಾಗವಾಗಿದೆ. ಎಲ್ಲಾ ಪರೀಕ್ಷೆಗಳು ಕಡ್ಡಾಯವಾಗಿರುತ್ತದೆ.

| ಪರೀಕ್ಷೆ | ಅಂಕಗಳು | ಪರೀಕ್ಷಾ ಅವಧಿ |
|---|---|---|
| ಪ್ರಾಯೋಗಿಕ(ಡ್ರಾಯಿಂಗ್) | 50 | ಒಂದು ತಾಸು |
| ಸಾಮಾನ್ಯ ಜ್ಞಾನ | 40 | ಅರ್ಧ ತಾಸು |
| ವೈಯಕ್ತಿಕ ಸಂದರ್ಶನ | 10 | |
| ಒಟ್ಟು ಅಂಕಗಳು | 100 | |

ಪ್ರವೇಶ ಪರೀಕ್ಷೆಯಲ್ಲಿ 50% ಅಂಕಗಳಿಸುವುದು ಕಡ್ಡಾಯ. ಪ್ರವೇಶ ಪರೀಕ್ಷೆಯಲ್ಲಿಗಳಿಸಿದ ಶ್ರೇಣಿಗನುಸಾರವಾಗಿ ಆದ್ಯತೆ ಮೇರೆಗೆ ಸೀಟು ಹಂಚಿಕೆಯಾಗುವುದು. ಪ್ರವೇಶ ಪರೀಕ್ಷೆಗೆ ಬೇಕಾದ ಡ್ರಾಯಿಂಗ್ ಬೋರ್ಡ ಮತ್ತು ಪೇಪರ್ ಕಾಲೇಜಿನಿಂದ ನೀಡಲಾಗುವುದು. ಪೆನ್ಸಿಲ್, ಬ್ರಶ್, ಬಣ್ಣ ಇತ್ಯಾದಿ ವಿದ್ಯಾರ್ಥಿ ತರತಕ್ಕದು. ಪ್ರವೇಶ ಪರೀಕ್ಷೆಗೆ ಪ್ರತ್ಯೇಕ ಸೂಚನೆ/ಸಂದೇಶ ಕಳುಹಿಸುವುದಿಲ್ಲ. ವಿದ್ಯಾರ್ಥಿ ತನ್ನ ಸ್ವಂತ ಖರ್ಚಿನಲ್ಲಿಯೇ ಪ್ರವೇಶ ಪರೀಕ್ಷೆಗೆ ಹಾಜರಾಗಬೇಕು.

**ಶಿಸ್ತು:** ಆಯ್ಕೆಗೊಂಡ ಅಭ್ಯರ್ಥಿ; ಕಾಲೇಜಿನ ಶಿಸ್ತು ನಿಯಾಮಾವಳಿಗೆ ಬದ್ದನಾಗಿರುತ್ತೇನೆಂದು ದೃಢೀಕರಣ ನೀಡಬೇಕು. ತಂದೆ/ತಾಯಿ/ಪೋಷಕರು ಸಹ ದೃಢೀಕರಣಕ್ಕೆ ಸಹಿ ಮಾಡಬೇಕು. ರ‍್ಯಾಗಿಂಗ್ ಸಂಪೂರ್ಣ ನಿಷೇಧವಾಗಿದ್ದು, ರ‍್ಯಾಗಿಂಗ್ ಪ್ರಕರಣದ ವಿರುದ್ದ ಕಠಿಣ ಕ್ರಮಕೈಗೊಳ್ಳಲಾಗುವುದು.

**ಲೈಬ್ರರಿ:** ಅಭ್ಯರ್ಥಿ ಪ್ರವೇಶ ಪಡೆದ ನಂತರ ವಾಚನಾಲಯದ ಶಿಸ್ತು ನಿಯಮಗಳಿಗೆ ಬದ್ದವಾಗಿ ವಾಚನಾಲಯದ ಸೌಲಭ್ಯವನ್ನು ಪಡೆಯಬಹುದು.

**ವಾಚನಾಲಯದ ಸಮಯ:** ಸೋಮವಾರದಿಂದ ಶುಕ್ರವಾರದವರೆಗೆ ಬೆಳಗ್ಗೆ 10:30 ರಿಂದ ಸಂಜೆ 5:30ರವರೆಗೆ.
ಶನಿವಾರ ಬೆಳಗ್ಗೆ 10:30 ರಿಂದ ಮಧ್ಯಾಹ್ನ 1:30ರವರೆಗೆ.

**ಸಾಮಾಗ್ರಿ ವೆಚ್ಚ:** ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ 75% ಹಾಜರಾತಿ ಮತ್ತು ಶೈಕ್ಷಣಿಕ ಪ್ರಗತಿ ಆಧಾರಿಸಿ ಸಾಮಾಗ್ರಿ ವೆಚ್ಚವೆಂದು ಮಾಹೆಯಾನ ರೂ.500/–ನ್ನು ನೀಡಲಾಗುವುದು. (ಕಾಲಕಾಲಕ್ಕೆ ಬದಲಾಗುವ ಸರ್ಕಾರದ ನಿಯಮ ಮತ್ತು ಷರತ್ತುಗಳಿಗೆ ಬದ್ದವಾಗಿದೆ) ಅಭ್ಯರ್ಥಿಯು ಕೋರ್ಸ ಮಧ್ಯದಲ್ಲಿ ಬಿಟ್ಟರೆ, ಸರ್ಕಾರದಿಂದ ಪಡೆದ ಸಾಮಾಗ್ರಿ ವೆಚ್ಚವನ್ನು ಹಿಂತಿರುಗಿಸಬೇಕಾಗುತ್ತದೆ.

**ಹಾಜರಾತಿ:** ವಿಷಯವಾರು/ಪತ್ರಿಕೆವಾರು 75% ಹಾಜರಾತಿ ಕಡ್ಡಾಯ. ಕಡಿಮೆ ಹಾಜರಾತಿ ಹೊಂದಿದವರು ಶೈಕ್ಷಣಿಕ ಸಾಲಿನ ಪರೀಕ್ಷೆಗಳಿಗೆ ಅರ್ಹರಾಗುವುದಿಲ್ಲ.

**ಪರೀಕ್ಷಾ ವಿಧಾನ ಮತ್ತು ಆಂತರಿಕ ಅಂಕಗಳು:** ವಿಶ್ವವಿದ್ಯಾಲಯ ನಿಗದಿಪಡಿಸಿದ ಮಾದರಿಯಲ್ಲಿರುತ್ತದೆ.

**ಕಾರ್ಯಾಗಾರಗಳು:** ಮೈಸೂರಿನ ಸಿದ್ಧಾರ್ಥನಗರದಲ್ಲಿ ವಿಶಾಲವಾಗಿ ಆವರಿಸಿಕೊಂಡಿರುವ ಕಾವಾದಲ್ಲಿ ಪ್ರತಿ ವಿಭಾಗದಲ್ಲಿ ವೃತ್ತಿಪರ ಅತಿಥಿಗಳಿಂದ ಉಪನ್ಯಾಸಗಳು, ಕಾರ್ಯಾಗಾರಗಳು ಹಮ್ಮಿಕೊಳ್ಳಲಾಗುವುದು. ವೃತ್ತಿಪರ ಕಲಾವಿದರೊಂದಿಗೆ ಸಂಭಾಷಣೆ, ಸ್ಲೈಡ್ ಶೋ, ಚರ್ಚೆ ಇತ್ಯಾದಿ ವಿದ್ಯಾರ್ಥಿಗಳ ಕಲಿಕೆಗೆ ವಿಶೇಷ ಪುಷ್ಠಿ ನೀಡುತ್ತವೆ. ಬದಲಾಗುತ್ತಿರುವ ನವ ತಂತ್ರಜ್ಞಾನಕ್ಕನುಗುಣವಾಗಿ ಕಾರ್ಯಾಗಾರಗಳು ರೂಪಿತವಾಗಿರುತ್ತವೆ. ಕಾರ್ಯಾಗಾರ ಪಠ್ಯದ ಅವಿಭಾಜ್ಯವಾಗಿರುವುದರಿಂದ ಹಾಜರಾತಿ ಕಡ್ಡಾಯವಾಗಿರುತ್ತದೆ.

**ಕ್ಯಾಂಪಸ್ ಸೆಲೆಕ್ಷನ್:** ಕಾವಾ ಕಾಲೇಜು ಆವರಣದಲ್ಲಿ "ಕ್ಯಾಂಪಸ್ ಆಯ್ಕೆ" ಸೌಲಭ್ಯವಿರುತ್ತದೆ.

**ಪ್ರಶಸ್ತಿಗಳು:** ಕಾವಾ ಕಾಲೇಜಿನಿಂದ ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆಂದೇ ಮೈಸೂರು ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಈ ಕೆಳಗಿನ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ.

1. ಕಲಾವಿದೆ ಶ್ರೀಮತಿ ಸುಭಾಷಿಣಿದೇವಿ ದತ್ತಿ ಚಿನ್ನದ ಪದಕ– ಬಿ.ವಿ.ಎ ಶಿಲ್ಪಕಲಾ ವಿಭಾಗಕ್ಕೆ
2. ಶ್ರೀ ಕೆ.ಕೆ.ಹೆಬ್ಬಾರ್ ಫೌಂಡೇಷನ್ ಚಿನ್ನದ ಪದಕ–ಬಿ.ವಿ.ಎ ಚಿತ್ರಕಲೆ/ ಶಿಲ್ಪಕಲೆ/ಗ್ರಾಫಿಕ್ಸ್ ಕಲೆ
3. ಶ್ರೀ ಕೆ.ಕೆ.ಹೆಬ್ಬಾರ್ ಫೌಂಡೇಷನ್ ನಗದು ಬಹುಮಾನ– ಬಿ.ವಿ.ಎ. ಎಲ್ಲಾ ವಿಭಾಗಗಳಿಗೆ ಸಂಬಂಧಿಸಿದಂತೆ
4. ತೇಕ್ಕಳ್ಳಿ ಶ್ರೀ ನರಸಿಂಗ್‌ರಾವ್ ಲಕ್ಷ್ಮಣರಾವ್ ಸ್ಮಾರಕ ದತ್ತಿ ನಗದು ಬಹುಮಾನ – ಬಿ.ವಿ.ಎ ಚಿತ್ರಕಲೆ ವಿಭಾಗಕ್ಕೆ
5. ಶ್ರೀ ಮಧುಸೂದನ್ ಚಿನ್ನದ ಪದಕ – ಬಿ.ವಿ.ಎ ಶಿಲ್ಪಕಲಾ ವಿಭಾಗಕ್ಕೆ
6. ಶ್ರೀಮತಿ ಸ್ವದೇಶ್ ಕಪೂರ್ ದತ್ತಿ ನಗದು ಬಹುಮಾನ – ಬಿ.ವಿ.ಎ ಛಾಯಚಿತ್ರ ಮತ್ತು ಛಾಯಪತ್ರಿಕೋದ್ಯಮ ವಿಭಾಗಕ್ಕೆ ನೀಡಲಾಗುತ್ತಿದೆ.

***~*~*~***

# INFORMATION LEAFLET

CAVA was established in 1982 by the Government of Karnataka with a view to encourage the cultivation of inherent artistic skills among aspiring art students and to promote excellence in all forms of visual arts. Chamarajendra Government College of Visual Arts (CAVA), a premier institution in the field of visual arts is affiliated to the University of Mysore. The college offers a **Four Year Degree Program** in six different disciplines leading to a Bachelor of Visual Arts (B.V.A.) Choice Based Credit System (C.B.C.S.) degree in **Applied Art, Painting, Sculpture, Graphics, Photography & Photojournalism and Art History.** These courses have been planned in response to the diverse and expanding roles the creative communities are called upon to play in a contemporary society. It is also an attempt to associate and integrate the skills and excellence of the past through academics.

CAVA has the best of faculty, infrastructure, wide collection of books in the library, audio visual equipment and other teaching aids to facilitate learning.

The syllabus is designed to encourage creative instincts and craftsmanship. The First and Second semester is intended to initiate the students into the rudiments of art and to develop their basic skills in visual art. It also provides them with an introduction to several avenues of visual art so that they are able to make an informed choice.

**Painting:** In this department, students learn drawing and image building. They also learn drawing from objects, drawing from nature, study of models, water color handling, oil color handling and exploring different methods and media in the light of contemporary art and ideas.

**Graphics:** Created images are made into limited artistic editions with the help of master blocks with good old classic methods. Lino cut, wood cut, metal plate etching, lithography, serigraphy and photo etching with new fine art techniques are adopted in the course curriculum.

**Sculpture:** Clay modeling, portrait study, life study, wood carving, stone carving, metal casting, terracotta and scrap sculpture are the main features in the course of study. Also there is freedom in creating creative 3 dimensional works in different media.

**Applied Art:** Here the use of visual language is a strong tool of communication. The present digital society needs visual communication in all walks of life. Poster designing, page layout, logo and computer graphics are some examples from the big basket of Applied Art.

**Photography & Photojournalism:** This unique course started by the University of Mysore gives an opportunity to learn the techniques of photography with a creative edge. Photojournalism with its candid images and photographs reaches the masses effectively. This course study with practical and theoretical knowledge makes one a powerful photojournalist.

**Art History:** This course teaches one the development of visual language through the ages in the light of cultural, socio political and philosophical thoughts. One learns Indian Art, Indo Islamic Art, European Art, Far Eastern and South Eastern Art. Contemporary art and ideas, art criticism and art appreciation are inbuilt features of this course.

The vibrant campus is located in Siddhartha Nagar. Reputed artists and professionals are invited as visiting faculty and workshops are conducted at regular intervals to invigorate and inspire the students. Frequent interactions, slide presentations, seminars and debates are the highlights of the academic curricula.

**Languages, Compulsory papers and workshops:** Language selection shall be as prescribed by the University of Mysore and exemption from the study is as per the rules and regulations of the University for the B.V.A. (C.B.C.S.) examinations. Examination and syllabus of **The Constitution of India** and **Environmental Studies** shall be as prescribed by the University of Mysore.

**Working hours of the college**: The class timings are from 9:30 a.m. to 4:00 p.m. from Monday to Friday and 9:30a.m. to 1:30p.m. on Saturdays.

**Application fee:** The students seeking admission may get the application and the information leaflet on payment of Rs. 250/-. Applications may be obtained through speed post by sending a crossed D.D. for Rs. 350/- payable to the DEAN, CAVA, Mysore. Cheques, postal orders and money orders will not be accepted. The application form duly filled along with copies of documents specified there under must reach the office of the DEAN, Chamarajendra Government College of Visual Arts, CAVA within the stipulated time. Applications received thereafter will not be considered.

**Special note:**

1. P.U.C. or equivalent examination marks card and transfer certificate to be enclosed with the application.
2. Candidates belonging to SC/ST/Cat-1 and other castes must furnish a caste certificate from a competent authority specified under reservation rules in force. All documents and certificates in original should be produced during the interview.
3. Age limit for admission to the first semester of the B.V.A. (C.B.C.S.) degree program is 24 years of age as on date of the entrance test. (24 years and above are not eligible for admission) Two years relaxation for SC/ST candidates.
4. Essential/related documents must be furnished compulsorily failing which such applications shall be rejected.
5. Candidates seeking admission under reserved category who fail to attach the caste certificate shall be considered under general category.
6. Reservation of seats for SC/ST/Cat-1 candidates will be in conformity with the Government orders in force.
7. B.V.A.- Painting, B.V.A.- Graphics, B.V.A.- Sculpture, B.V.A.- Applied Art, B.V.A.- Photography and Photojournalism, B.V.A. – Art History are six specialised degree courses. The candidate has to choose one discipline in preferential order. The total number of seats for first semester of the B.V.A. is 60 only.
8. The calendar for the academic year is as approved by the University.

**Aptitude test**: There will be an aptitude test, drawing test and personal interview for candidates seeking admission to the first semester of the B.V.A. (Bachelor of Visual Arts) C.B.C.S. (Choice Based Credit System) degree program.

| **Nature of test:** | **Marks** | **Duration** |
|---|---|---|
| Drawing | 50 | 1 hour |
| General knowledge | 40 | 30 minutes |
| Personal interview | 10 | |
| Total- | 100 | |

Securing 50% in each is compulsory. The college will provide drawing boards and papers required for the aptitude and drawing test. The students should bring pencils, brushes, colours and appear for the test at their own cost and no separate intimation regarding the test will be given.

**Discipline**: Selected candidates will sign a declaration/undertaking to abide by the rules of conduct and discipline, which should be countersigned by their parent/guardian. Ragging will be dealt with strictly and the student will be rusticated. Decision of the Dean regarding the academic matters is final.

**Library:** Admitted Students should register their names in the library obtain the library card and follow the library rules compulsorily.

**Timings of the library:** Monday to Friday 10:30 a.m. to 5:30 p.m. (excluding lunch hour)
Saturday 10:30 a.m. to 1:30 p.m.

**Material expenses:** Material expenses will be given to the students based on attendance (75% minimum) and academic performance. B.V.A. (C.B.C.S.) degree program – Rs. 500 per month. (as per government orders from time to time). Students discontinuing the course in the middle of the year will have to repay the material expenditure drawn by them during that academic year.

**Attendance :** 75% of attendance in each paper is compulsory. A candidate who does not satisfy the minimum requirements of attendance in each subject shall not be permitted to take the examination conducted by the institution/ University.

**Scheme of examination:** As per university rules.

**Workshops:** Workshops are conducted periodically in different departments to keep up with changing needs and technology. Eminent artists and resource persons are invited to conduct these workshops, seminars and discussions.

**Campus Selection:** Cava has a campus selection facility. Well known organizations participate in this process.

**Awards:**

1. Artist Smt. G.V.Subhashinidevi Endowment Gold Medal – B.V.A. Degree in Sculpture.
2. Sri K.K.Hebbar Arts Foundation Gold Medal– B.V.A. Degree in Painting/Graphics/Sculpture.
3. Thekalli Narasinga Rao Lakshmana Rao Memorial Endowment Cash Prize - B.V.A. Degree in Painting.
4. Sri K.K.Hebbar Arts Foundation Cash Prize - B.V.A. Degree in All Departments.
5. Sri Madhusudhan Gold Medal – B.V.A. Degree in Sculpture.
6. Smt Swadesh Kapur Cash Prize Endowment – B.V.A. Degree in Photography & Photojournalism.

*–*–*

Hmj20-21

# ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು[ಕಾವಾ]

ಹೊಸ ಡಿ.ಸಿ. ಕಛೇರಿ ಹಿಂಭಾಗ, ಸಿದ್ಧಾರ್ಥನಗರ, ಮೈಸೂರು.

## ನಗರ ಸಾರಿಗೆ: ಸಿಟಿ ಬಸ್ ನಿಲ್ದಾಣದಿಂದ

ಮಾರ್ಗ ಸಂಖ್ಯೆ: 161 ಇಳಿಯುವ ಸ್ಥಳ: ಬಿ ಕಂಪನಿ/ ಕೇಂದ್ರಿಯ ವಿದ್ಯಾಲಯ,
ರಾಘವೇಂದ್ರನಗರ, ಮೈಸೂರು.

ಮಾರ್ಗ ಸಂಖ್ಯೆ: 80 ಮತ್ತು 182 ಇಳಿಯುವ ಸ್ಥಳ ಜಿ.ಎಸ್.ಎಸ್. ಸ್ಕೂಲ್, ಬನ್ನೂರು ರಸ್ತೆ,
ಸಿದ್ಧಾರ್ಥನಗರ, ಮೈಸೂರು.

CHAMARAJENDRA GOVT. COLLEGE OF VISUAL ARTS, [CAVA],

Behind New D.C. Office, Siddarthanagara, Mysuru.

## CITY BUS FACILITY: FROM CITY BUS STAND

Route No. 161 alight at -**'B' COMPANY / KENDRIYA VIDYALAYA**,
Raghavendra nagara, Mysuru.

Route No. 80 and 182 alight at- **GSS school, Bannur Road, Siddarthanagara,** Mysuru.

